ಕೊಟ್ಟವರಲ್ಲ. ದೊಡ್ಡ ಸಂಭ್ರಮಾಚರಣೆಗಳಲ್ಲಿ ಅವರನ್ನು ಕಾಣುವುದು ವಿರಳವೇ ಆಗಿತ್ತು. ಇಂಥ ವ್ಯಕ್ತಿ ಇಷ್ಟೊಂದು ಜನರನ್ನು ತಟ್ಟಿದ್ದರೆ, ಇದರಲ್ಲಿ ಅವರ ಸ್ವಂತ ವ್ಯಕ್ತಿತ್ವದ ಜೊತೆಗೆ, ಟಾಟಾ ಸಮೂಹದ ಮೌಲ್ಯಗಳೂ ಕಾರಣ.

ರತನ್ ಟಾಟಾರನ್ನು ಅವರ ಶ್ವಾನಪ್ರಿಯತೆ – ಪ್ರಾಣಿಗಳ ಬಗೆಗಿದ್ದ ವ್ಯಾಪಕ ಸಹಾನುಭೂತಿಗಾಗಿ ಅನೇಕರು ನೆನಪು ಮಾಡಿಕೊಂಡಿದ್ದಾರೆ. ಕೆಲವರು ಟಾಟಾ ಸಮೂಹದ ಉದ್ಯೋಗಿಗಳ ಕ್ಷೇಮಾಭಿವೃದ್ಧಿಯ ಬಗೆಗಿದ್ದ ಅವರ ಕಾಳಜಿಯನ್ನು, ಮುಂಬೈನ ತಾಜ್ ಹೋಟೆಲಿನಲ್ಲಿ ಘಟಿಸಿದ ಆತಂಕವಾದಿಗಳ ದಾಳಿಯ ನಂತರ ಖುದ್ದು ನಿಂತು ತಮ್ಮ ವ್ಯಾಪಾರವನ್ನು ಮರುನಿರ್ಮಿಸಿದ ಪರಿಯನ್ನು ನೆನಪು ಮಾಡಿಕೊಂಡರೆ, ಇನ್ನಷ್ಟು ಜನ ಬೈಕಿನಲ್ಲಿ ಹೆಲ್ಮೆಟ್ ಇಲ್ಲದೇ ಮಳೆಯಲ್ಲಿ ನೆನೆಯುತ್ತಾ ಪಯಣಿಸುತ್ತಿದ್ದ ಕುಟುಂಬವನ್ನು ಕಂಡು ಮಧ್ಯಮವರ್ಗದವರಿಗೆ ಎಟುಕುವ ಕಾರನ್ನು ನಿರ್ಮಿಸಬೇಕೆಂದು ಪಣತೊಟ್ಟ ಟಾಟಾರನ್ನು ನೆನಪು ಮಾಡಿಕೊಂಡಿದ್ದಾರೆ. ಜಾಗತಿಕ ಮಟ್ಟದಲ್ಲಿ ಚಹಾ ಕಂಪನಿ 'ಟೆಟ್ಲಿ', ಉಕ್ಕು ತಯಾರಿಸುವ 'ಕೋರಸ್' ಮತ್ತು ಕಾರು ತಯಾರಿಸುವ 'ಜಾಗ್ವಾರ್ ಲ್ಯಾಂಡ್ ರೋವರ್' ಕಂಪನಿಗಳ ಅಧಿಗ್ರಹಣವನ್ನೂ ಅವರ ಸಾಧನೆಗಳಲ್ಲಿ ಉಲ್ಲೇಖಿಸಲಾಗುತ್ತದೆ. ಆದರೆ ರತನ್ ಟಾಟಾರ ಜೀವನವನ್ನು ಇನ್ನಷ್ಟು ವಿಸ್ತೃತವಾಗಿ ಚರ್ಚಿಸಬೇಕಾಗಿದೆ.

ರತನ್ ಟಾಟಾ ತಮ್ಮ ವೃತ್ತಿಯ ಆರಂಭದ ದಿನಗಳಲ್ಲಿ ಟಾಟಾ ಸ್ಟೀಲ್ ಕಂಪನಿಯಲ್ಲಿ ನೀಲಿ ಬಟ್ಟೆ ಧರಿಸಿ ಷಾಪ್ ಫ್ಲೋರಿನ ಮೇಲೆ ಕೆಲಸ ಮಾಡಿದ್ದರೆಂದು ಪ್ರತೀತಿ. ಆದರೆ ಟೀವಿಗಳನ್ನು ತಯಾರಿಸುತ್ತಿದ್ದ ನಷ್ಟದ ಕೂಪದಲ್ಲಿದ್ದ ಸಮೂಹದ ಕಂಪನಿಗಳಲ್ಲಿ ಒಂದಾದ 'ನೆಲ್ಕೋ'ವನ್ನು ಲಾಭಕ್ಕೆ ತಿರುಗಿಸಿದ ಕಾರಣದಿಂದ ಅವರ ನಿರ್ವಹಣಾ ಕೌಶಲಕ್ಕೆ ಹೆಸರು ಉಂಟಾಯಿತು.

ಟಾಟಾ ಸಮೂಹದ ನಾಯಕತ್ವವನ್ನು ರತನ್ ಟಾಟಾ ವಹಿಸಿಕೊಂಡಾಗ ಅನೇಕ ಬದಲಾವಣೆಗಳನ್ನು ಜಾರಿ ಮಾಡಿದರು. ಅಲ್ಲಿಯ ತನಕ ಟಾಟಾ ಸಮೂಹದ ಕಂಪನಿಗಳು ಹರಿದು ಹಂಚಿಹೋಗಿ ಅನೇಕ 'ಪಾಳೇಗಾರರ' ನಿಯಂತ್ರಣದಲ್ಲಿದ್ದವು. ರೂಸಿ ಮೋದಿ, ಅಜಿತ್ ಕೇರ್ಕರ್ ಮತ್ತು ದರ್ಬಾರಿ ಶೇಠ್‌ರಂಥ ದಿಗ್ಗಜರು ಸಮೂಹದ ಭಿನ್ನ ಕಂಪನಿಗಳನ್ನು ಸ್ವತಂತ್ರವಾಗಿ ತಮ್ಮದೇ ನಾಯಕತ್ವ–ಪಾಳೇಗಾರಿಕೆಯಲ್ಲಿ ಚಲಾಯಿಸುತ್ತಿದ್ದರು. ಸಮೂಹದ ಚುಕ್ಕಾಣಿ ಹಿಡಿದ ಮೇಲೆ ವರಿಷ್ಠರು 75ನೇ ವಯಸ್ಸಿಗೆ ಸಮೂಹದ ಆಡಳಿತ ಮಂಡಳಿಯಿಂದ ಕಡ್ಡಾಯವಾಗಿ ನಿವೃತ್ತಿ ಹೊಂದಬೇಕು ಎನ್ನುವ ನಿಯಮವನ್ನು ರತನ್ ಟಾಟಾ ಜಾರಿ ಮಾಡಿದರು. ಹೀಗೆ ಹಿರಿಯರಾಗಿದ್ದ ಅನೇಕರನ್ನು 'ಮಾರ್ಗದರ್ಶಕ ಮಂಡಳಿ'ಗೆ ಏರಿಸುವ ಕೆಲಸವನ್ನು ರತನ್ ಟಾಟಾ ಮಾಡಿದರು. ಆಮೇಲೆ ಟಾಟಾ ಸಮೂಹಕ್ಕೆ ಒಂದು ವಿಶಿಷ್ಟ ಮತ್ತು ಎಲ್ಲ ಸಂಸ್ಥೆಗಳಿಗೂ ವರ್ತಿಸುವ ಗುರುತನ್ನು ಒದಗಿಸುವುದರಲ್ಲಿ ಯಶಸ್ವಿಯಾದರು. ಇಂದು ನಾವು ಕಾಣುವ ಟಾಟಾ ಕಂಪನಿಯ ಲೋಗೊ ತಯಾರಾಗಿದ್ದು ಅವರ ನಾಯಕತ್ವದ ಆದಿಯಲ್ಲಿ. ಸಮೂಹ ಕಂಪನಿಗಳು ಟಾಟಾ ಹೆಸರನ್ನು ಉಪಯೋಗಿಸಲು ಗೌರವಧನ ಕೊಡಬೇಕೆಂಬ ನಿಯಮವನ್ನೂ ಜಾರಿ ಮಾಡಿದರು. ಟಾಟಾ ಸಮೂಹದ ನಿಯಂತ್ರಣದ ವಿಷಯದಲ್ಲಿ ರತನ್ ಟಾಟಾ ತಮ್ಮ ಮುತ್ಸದ್ದಿತನವನ್ನು ತೋರಿದ್ದಲ್ಲದೇ, ನಿರ್ಮಮಕಾರವಾಗಿ ಅಧಿಕಾರವನ್ನು ತಮ್ಮಲ್ಲೇ ಕೇಂದ್ರೀಕರಿಸಿಕೊಳ್ಳುವುದರಲ್ಲಿ ಸಫಲರಾದರು. ವ್ಯಾಪಾರಿ ಸಂಸ್ಥೆಯ ಮುಖ್ಯಸ್ಥರಾಗಿ ಸಹಜವಾಗಿಯೇ ಮಾಡಬೇಕಿದ್ದ ಕೆಲಸಗಳನ್ನು ಕೂಡ ಮಾಡಿದರು.

ಈಗ ಅವಲೋಕಿಸಿದಾಗ ರತನ್ ಟಾಟಾರ ಯಶಸ್ಸೇ ಹೆಚ್ಚು ಕಾಣಿಸುತ್ತಿದೆಯಾದರೂ, ಅವರ ಅವಧಿಯಲ್ಲಿ ಹಲವು ವೈಫಲ್ಯಗಳೂ ಸಂಭವಿಸಿವೆ. 'ಟೆಲ್ಕೋ' ಎಂದೇ ಹೆಸರು ಪಡೆದಿದ್ದ ಇಂದಿನ



**ಡಿಸೆಂಬರ್ 28, 1937**
**ಅಕ್ಟೋಬರ್ 9, 2024**

'ಟಾಟಾ ಮೋಟಾರ್ಸ್' ಆಗ ಬರೇ ಟ್ರಕ್ಕುಗಳನ್ನು ತಯಾರಿಸುತ್ತಿತ್ತು. ಅದರ ಉತ್ಪನ್ನಗಳ ಸಾಲಿಗೆ 'ಇಂಡಿಕಾ' ಕಾರನ್ನು ಸೇರಿಸಿದ್ದು ರತನ್ ಟಾಟಾರೇ. 'ಇಂಡಿಕಾ' ಕಾರಿನ ಮೊದಲ ದಿನಗಳಲ್ಲಿ ಅದನ್ನು 'ಇಟ್ ಇಸ್ ಎ ಟ್ರಕ್ ಟೇಕನ್ ಟು ಎ ಬ್ಯೂಟಿ ಪಾರ್ಲರ್'ಎಂದು ಗೆಳೆಯರೊಬ್ಬರು ವಿವರಿಸಿದ್ದರು. ಆ ಕಾಲದಲ್ಲಿ 'ಟಾಟಾ ಮೋಟಾರ್ಸ್' ವ್ಯಾಪಾರದಲ್ಲಿ ದೊಡ್ಡ ಗೆಲುವುಗಳಿಲ್ಲದೇ ಮುಂದುವರೆದಿತ್ತು. ಆ ದಿನಗಳಲ್ಲಿ ಸಮೂಹ ಸಂಸ್ಥೆಗಳ ಒಟ್ಟಾರೆ ಲಾಭದಾಯಕತೆ (ಮತ್ತು ನಷ್ಟಗಳು) ಒಂದೆಡೆಯಾದರೆ, ಅವೆಲ್ಲವನ್ನೂ ಮೀರಿ ಲಾಭದಾಯಕವಾಗಿದ್ದ ವ್ಯಾಪಾರದಲ್ಲಿ ಪ್ರಯೋಗಗಳನ್ನು ಮಾಡಲು ಸಾಕಷ್ಟು ಆರ್ಥಿಕ ಸಂಪನ್ಮೂಲಗಳನ್ನು ಒದಗಿಸುತ್ತಿದ್ದುದು ಸಾಫ್ಟ್‌ವೇರ್ ತಯಾರಿಸುತ್ತಿದ್ದ 'ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್' (ಟಿಸಿಎಸ್). ಆಗಿನ ದಿನಗಳಲ್ಲಿ 'ಟಿಸಿಎಸ್' ಟಾಟಾ ಸನ್ಸ್‌ನ ವಿಭಾಗವಾಗಿತ್ತು. ಟಾಟಾ ಸನ್ಸ್ ಎಂಬುದು ಟಾಟಾ ಸಮೂಹದ ಕಂಪನಿಗಳನ್ನು ನಿಯಂತ್ರಿಸುತ್ತಿದ್ದ ಮಾತ್ರ ಕಂಪನಿ ಎನ್ನುವುದನ್ನು ಗಮನಿಸಬೇಕು. ಆ ನಂತರದ ವರ್ಷಗಳಲ್ಲಿ 'ಟಿಸಿಎಸ್' ಭಿನ್ನ ಕಂಪನಿಯಾಗಿ ರೂಪುಗೊಂಡಿತು.

ರತನ್ ಟಾಟಾ ನಿವೃತ್ತರಾದಾಗ ತಮ್ಮ ಉತ್ತರಾಧಿಕಾರಿಯನ್ನು ನೇಮಿಸುವ ವಿಚಾರದಲ್ಲೂ ಮೊದಲಿಗೆ ವಿಫಲರಾದರು. ವಿಶ್ವವ್ಯಾಪಿ ಹುಡುಕಾಟದ ನಂತರವಷ್ಟೇ ಅವರಿಗೆ ಮನೆಯ ಹತ್ತಿರಲ್ಲೇ ಇದ್ದ ಸೈರಸ್ ಮಿಸ್ತ್ರಿ ಕಂಡರು. ಅವರನ್ನು ಟಾಟಾ ಸಮೂಹದ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ತಾವೇ ರೂಪಿಸಿದ ನಿಯಮದಂತೆ 75ರ ವಯಸ್ಸಿಗೆ ರತನ್ ಟಾಟಾ ದಿನನಿತ್ಯದ ಕೆಲಸದಿಂದಲೂ ಮತ್ತು ಆಡಳಿತ ಮಂಡಳಿಯಿಂದಲೂ ನಿವೃತ್ತರಾಗಬೇಕಿತ್ತು. ಆದರೆ ಟಾಟಾ ಸಮೂಹದ ನಿಯಮಾವಳಿಯಲ್ಲಿ ಒಂದು ವಿಶೇಷ ಬದಲಾವಣೆ ಮಾಡಲಾಯಿತು. ಟಾಟಾ ಸಮೂಹದ ಆಡಳಿತ ಮಂಡಳಿಯಲ್ಲಿ ಟಾಟಾ ದತ್ತಿನಿಧಿಗಳ ಪ್ರತಿನಿಧಿಯಾಗಿ ಯಾರೇ ಇದ್ದರೂ ಅವರಿಗೆ ವಯಸ್ಸಿನ ನಿರ್ಬಂಧವಿರುವುದಿಲ್ಲ ಎನ್ನುವ ಹೊಸ ನಿಯಮದಡಿ ಮಾತ್ರ ಕಂಪನಿಯ ಆಡಳಿತ ಮಂಡಳಿಯಲ್ಲಿ ರತನ್ ಟಾಟಾ ಮುಂದುವರೆದರು.

ಸಮೂಹದ ಹೊಸ ನಾಯಕತ್ವದಲ್ಲಿ ವ್ಯಾಪಾರ ಮತ್ತು ಅದನ್ನು ಬೆಳೆಸುವುದರ ಬಗ್ಗೆ ಸೈರಸ್ ಮಿಸ್ತ್ರಿಯವರ ದೃಷ್ಟಿ ಕೇಂದ್ರೀಕೃತವಾಗಿದ್ದರಿಂದ, ಬಂದ ಲಾಭಗಳನ್ನು ವ್ಯಾಪಾರದಲ್ಲಿ ಮರುಹೂಡಿಕೆ ಮಾಡುವ ಪ್ರಕ್ರಿಯೆ ಪ್ರಾರಂಭವಾಯಿತು. ಹೀಗಾಗಿ ವರ್ಷಾಂತ್ಯದಲ್ಲಿ ಷೇರುದಾರರಿಗೆ ಹೆಚ್ಚಿನ ಲಾಭಾಂಶವನ್ನು ಘೋಷಿಸುತ್ತಿರಲಿಲ್ಲ. ಟಾಟಾ ದತ್ತಿನಿಧಿಗಳ ಜೀವನಾಡಿಯೇ ಟಾಟಾ ಸಂಸ್ಥೆಗಳ ಲಾಭಾಂಶ ಹಂಚಿಕೆಯಲ್ಲಿದೆ. ಲಾಭಾಂಶದ ವಿತರಣೆ ಆಗದಿದ್ದರೆ, ಸಾಮಾಜಿಕ ಸೇವೆಯ ಕಾರ್ಯಗಳಿಗೆ ತಕ್ಕಷ್ಟು ಆರ್ಥಿಕ ಸಂಪನ್ಮೂಲ ಒದಗುವುದಿಲ್ಲ. ಈ ಮಾತೇ ಟಾಟಾ ಮತ್ತು ಮಿಸ್ತ್ರಿಯ ನಡುವಿನ ಭಿನ್ನಾಭಿಪ್ರಾಯಕ್ಕೆ ಮೂಲ ಕಾರಣವಾಯಿತು. ಮಿಸ್ತ್ರಿಯೊಂದಿಗೆ ಟಾಟಾಗಿದ್ದ ತೀವ್ರ ಭಿನ್ನಾಭಿಪ್ರಾಯಗಳಿಂದಾಗಿ ರಾತ್ರೋರಾತ್ರಿ ಅವರನ್ನು ಪದವಿಯಿಂದ ಕೆಳಗಿಳಿಸಲಾಯಿತು. ಕಾರ್ಪೊರೇಟ್ ಗವರ್ನೆನ್ಸ್‌ಗೆ ಮಾದರಿ ಎಂಬ ಹೆಗ್ಗಳಿಕೆ ಇದ್ದ ಟಾಟಾ ಸಮೂಹದ ಮಟ್ಟಿಗೆ ಈ ಘಟನೆ ಸದಾ ಕಪ್ಪುಚುಕ್ಕೆಯಾಗಿಯೇ ಉಳಿಯುತ್ತದೆ. ಹೀಗೆ ವ್ಯಾಪಾರಿ ಸಂಸ್ಥೆಯೊಂದರ ಅತ್ಯುನ್ನತ ಸ್ಥಾನದಲ್ಲಿ ಕೂತು ಯಾವ ಬಗೆಯ ನಿರ್ಮಮಕಾರ ಮತ್ತು ದಕ್ಷತೆಯಿಂದ ನಿರ್ವಹಿಸಬೇಕೋ ಅದೇ ರೀತಿಯಲ್ಲಿ ರತನ್ ಟಾಟಾ ಕೂಡ ಕಾರ್ಯ ನಿರ್ವಹಿಸಿದರೆಂದು ಹೇಳಬಹುದು.

ಅವರ ಸಾಧನೆಗಳ ಪಟ್ಟಿಯನ್ನು ತಯಾರು ಮಾಡುವಾಗ ನಮಗೆ ಕಾಣುವುದು ಅವರ ಆಡಳಿತದ ಉತ್ತರಾರ್ಧದಲ್ಲಿ ಕೈಗೊಂಡ ವ್ಯಾಪಾರ ಮತ್ತು ಅಧಿಗ್ರಹಣಗಳು. ಹೀಗಾಗಿ ರತನ್ ಟಾಟಾರನ್ನು ದೈವತ್ವಕ್ಕೆ ಏರಿಸುವ ಮುನ್ನ ಅವರು ಮಾನವರಾಗಿದ್ದರು ಎನ್ನುವುದನ್ನು ನಾವು ಮರೆಯಬಾರದು.

ಈ ಮಾನವ ರಾಗದ್ವೇಷಗಳನ್ನು ಮೀರಿ